**CCE PR**
**UN-REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 03. 2018 ] **ಸಂಕೇತ ಸಂಖ್ಯೆ : 33-K**

Date : 28. 03. 2018 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ಗಿಳಿಯ ತತ್ವನಿಷ್ಠೆ ಯಾವುದಾಗಿತ್ತು ? | |
| | ***ಉತ್ತರ :*** | |
| | ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದವರು ದುರ್ಭರ ಗಳಿಗೆಯಲ್ಲಿ ಕೂಡ ಅವರ ಜೊತೆಗೆ ಇದ್ದು ಉಪಕಾರ ಸ್ಮರಣೆ ಮಾಡಬೇಕು ಎಂಬುದು ಗಿಳಿಯ ತತ್ತ್ವನಿಷ್ಠೆ. | |
| 2. | ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ? | |
| | ***ಉತ್ತರ :*** | |
| | ಇಂದ್ರನು ಗಿಳಿಯ ತತ್ತ್ವನಿಷ್ಠೆಯ ಗುಣವನ್ನು ಮೆಚ್ಚಿಕೊಂಡನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಹೇಗೆ ?<br>***ಉತ್ತರ :***<br>ರಾಹುಲರ ಹೆಸರಿಗೆ ದ್ರಾವಿಡ್ ಎಂಬ ಪದವು ಅವರ ಮುತ್ತಜ್ಜನಿಂದ ಸೇರಿಕೊಂಡಿತು. | |
| 4. | ಭಾರತೀಯ ಸಂಗೀತದ ಎರಡು ಶೈಲಿ ಯಾವುದು ?<br>***ಉತ್ತರ :***<br>ಭಾರತೀಯ ಸಂಗೀತದ ಎರಡು ಶೈಲಿಗಳು ಹಿಂದೂಸ್ಥಾನಿ ಮತ್ತು ಕರ್ನಾಟಕ ಶೈಲಿ. | |
| 5. | ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಯಾವುದು ?<br>***ಉತ್ತರ :***<br>ಕಲಿಕೆಗೆ ಮುಖ್ಯವಾಗಿ ಸೂಕ್ಷ್ಮಮತಿ ಮತ್ತು ಏಕಾಗ್ರತೆ ಇರಬೇಕು. | |
| 6. | ಅಜ್ಜನು ಸಾಹೇಬರ ಕಪಾಳಕ್ಕೆ ಹೊಡೆದದ್ದು ಏಕೆ ?<br>***ಉತ್ತರ :***<br>ಅಜ್ಜನು ಸಾಹೇಬರ ಕಪಾಳಕ್ಕೆ ಹೊಡೆದದು ಶಿಷ್ಯನ ಮೇಲಿದ್ದ ಅಪಾರ ಪ್ರೀತಿಯಿಂದ. | |
| 7. | ಸಾಧಕ ಶಿಷ್ಯರ ಬಗೆಗಿರುವ ರಾಮನ್‌ರ ದೊಡ್ಡ ಗುಣ ಯಾವುದು ?<br>***ಉತ್ತರ :***<br>ಶಿಷ್ಯರನ್ನು ನೇಮಕ ಮಾಡಿಕೊಳ್ಳುವ ಸಂಸ್ಥೆಯ ಅಧಿಕಾರಿಗಳಿಗೆ ಪತ್ರ ಬರೆದು, ಶಿಷ್ಯನ ಪ್ರತಿಭೆಯನ್ನು ಕೊಂಡಾಡಿ ಕೆಲಸ ಸಿಗುವಂತೆ ಮಾಡುವುದು. | |
| 8. | ಯೋಗಿಯ ಸಾಧನೆಯನ್ನು ಮೀರಿದ್ದು ಯಾವುದು ?<br>***ಉತ್ತರ :***<br>ಯೋಗಿಯ ಸಾಧನೆಗೆ ಮಿಗಿಲಾದುದು ಹೆಣ್ಣುಗಳ ಒಲುಮೆ. | |
| 9. | ಸೂರ್ಯ ಚಂದ್ರರಿಗಿಂತಲೂ ಬಾಹುಬಲಿಯು ಶ್ರೇಷ್ಠನು ಹೇಗೆ ?<br>***ಉತ್ತರ :***<br>ಸೂರ್ಯ ಚಂದ್ರರೂ ಬಾಹುಬಲಿಯನ್ನು ಪ್ರದಕ್ಷಿಣೆ ಹಾಕುವುದರಿಂದ ಬಾಹುಬಲಿಯೇ ಶ್ರೇಷ್ಠ. | |
| 10. | ಬರೀ ಸದ್ದು ಮಾಡುವುದು ಯಾವುದು ?<br>***ಉತ್ತರ :***<br>ಬರೀ ಸದ್ದು ಮಾಡುವುದು ಸಿಡಿಮದ್ದು ಹಾಗೂ ಹಸಿ ಸೌದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಮಕ್ಕಳ ಹಸಿವನ್ನು ಬಲ್ಲವರು ಯಾರು ?<br>***ಉತ್ತರ :***<br>ಮಕ್ಕಳ ಹಸಿವನ್ನು ತಾಯಿ ಬಲ್ಲಳು. | |
| 12. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದವರಲ್ಲಿ ಇರಬೇಕಾದ ಗುಣ ದಯೆ. | |
| 13. | ಯಾವಾಗ ಕೆರೆಯನ್ನು ತೋಡಿದ್ದು ನಿಷ್ಫಲವಾಗುತ್ತದೆ ?<br>***ಉತ್ತರ :***<br>ಪುಣ್ಯತೀರ್ಥಗಳು ಬರದಿದ್ದಾಗ ಕೆರೆಯನ್ನು ತೋಡಿದರೂ ನಿಷ್ಫಲವಾಗುತ್ತದೆ. | |
| 14. | ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?<br>***ಉತ್ತರ :***<br>ಯುದ್ಧಭೂಮಿಯಲ್ಲಿನ ಸೈನ್ಯ ಹಾಗೂ ಸಾರಥಿ ತನ್ನನ್ನು ಬಿಡುವುದಿಲ್ಲವೆಂಬ ಭಯದಿಂದ ನಿಟ್ಟೋಟದಲ್ಲಿ ಓಡಿದನು. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $15 \times 2 = 30$ |
| 15. | ಮರವನ್ನು ಬಿಟ್ಟುಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನಾಗಿತ್ತು ?<br>***ಉತ್ತರ :***<br>ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ನೀಡಿದೆ, ಹಣ್ಣು ಕೊಟ್ಟಿದೆ, ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ, ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಈ ಸ್ಥಿತಿಯಲ್ಲಿ ನಾನು ಕೈಬಿಟ್ಟು ಬೇರೆ ಕಡೆ ಹೋಗಿ ಕೃತಘ್ನನಾಗಲೇ ಎಂದು ಗಿಳಿಯು ಸಮರ್ಥಿಸಿಕೊಂಡಿತು. | |
| 16. | ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?<br>***ಉತ್ತರ :***<br>ರಾಹುಲ್ ದ್ರಾವಿಡರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನೂ ನಿಭಾಯಿಸುವ, ವಿಕೆಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್‌ಗಳಿಸುವ, ಅದ್ವಿತೀಯ ಬ್ಯಾಟಿಂಗ್ ಶೈಲಿಯಿಂದ ದಿನವಿಡೀ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರಾಗಲು ಕಾರಣವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದುದರ ಪರಿಣಾಮವೇನು ?<br>*ಉತ್ತರ :*<br>ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದ್ದರಿಂದ ಪ್ರವಾಹದ ಹಾವಳಿ ಹೆಚ್ಚಿ, ಭೂಕುಸಿತ ಉಂಟಾಗಿದೆ; ಅಂತರ್ಜಲ ಕಡಿಮೆಯಾಗಿ, ನದಿಗಳು ಬತ್ತತೊಡಗಿವೆ. ಕಾಡು ಪ್ರಾಣಿಗಳು ನಾಡಿಗೆ ಲಗ್ಗೆ ಇಡುವಂತಾಗಿದೆ. | |
| 18. | ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ ?<br>*ಉತ್ತರ :*<br>ನಮಗೆ ಬೇಕಾದ ವಿದ್ಯುತ್, ಉರುವಲು, ಕಾಫಿಪುಡಿ, ನಾವು ದಿನನಿತ್ಯ ಬಳಸುವ ಲೋಹದ ವಸ್ತುಗಳು, ಬೆತ್ತದ ಕುರ್ಚಿಗಳು, ಕಾಗದ ಇವುಗಳೆಲ್ಲ ನಮ್ಮ ದಿನನಿತ್ಯ ವಸ್ತುಗಳಾಗಿದ್ದು; ಇವು ಪಶ್ಚಿಮ ಘಟ್ಟದಿಂದಲೇ ದೊರಕುತ್ತಿವೆ. | |
| 19. | ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ಹೇಗೆ ತೋರಿದೆ ?<br>*ಉತ್ತರ :*<br>ಪ್ರಕೃತಿ ಪೆಟ್ಟು ತಿಂದ ಬಳಿಕ ಮೊದಮೊದಲು ಮೆಲ್ಲಗೆ ಪ್ರತಿಭಟಿಸಿತು. ಅರಣ್ಯ ಸೂರೆ ಹೆಚ್ಚಿದಾಗ ಪ್ರಕೋಪ ಹೆಚ್ಚಾಯಿತು. ಘಾಸಿಗೊಂಡ ಪಶ್ಚಿಮ ಘಟ್ಟಗಳ ಕೋಪತಾಪದ ಪ್ರಭಾವ ಕಾಡುಗುಡ್ಡಗಳ ಪರಿಮಿತಿಯನ್ನು ಮೀರಿ ಬಯಲಿಗೆ ಬಂತು. ಹವಾಮಾನದಲ್ಲಿ ಏರುಪೇರುಂಟಾಗಿ ಅತೀವೃಷ್ಟಿ, ಅನಾವೃಷ್ಟಿಗಳಿಗೆಲ್ಲಾ ಪಶ್ಚಿಮ ಘಟ್ಟಗಳೇ ಕಾರಣವೆಂದು ತಿಳಿಯಬಹುದು. ಹೀಗೆ ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ತೋರಿಸುತ್ತಾ ಬಂದಿದೆ. | |
| 20. | ರಾಮನ್‌ರು ಶಿಷ್ಯರ ಸೆಮಿನಾರುಗಳನ್ನು ಏಕೆ ತಪ್ಪಿಸಿಕೊಳ್ಳುತ್ತಿರಲಿಲ್ಲ ?<br>*ಉತ್ತರ :*<br>ರಾಮನ್‌ರವರು ಪ್ರತಿಯೊಬ್ಬರೂ ಏನು ಮಾಡಬೇಕು, ಯಾವ ರೀತಿ ಮುಂದುವರಿಯಬೇಕು, ಎಂಬ ಸಲಹ ನೀಡಲು, ಶಿಷ್ಯರ ಸಂಶೋಧನಾ ವಿವರ ತಿಳಿಯಲು ಸಂಶೋಧ ಸಮಯದಲ್ಲಿ ಬಂದ ಸಂದೇಹ ಪರಿಹರಿಸಲು ಸೆಮಿನಾರುಗಳನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ತಾಯಿಯು ಜೊತೆಗಿದ್ದರೆ ಬನವೇ ಸೊಗಸು ಎಂದು ಮಗನಿಗನಿಸಿದ್ದು ಏಕೆ ?<br>*ಉತ್ತರ :*<br>ಗೋಪಾಲನು ಬನದಲ್ಲಿನ ಮಲ್ಲಿಗೆ ಹೂವು, ಕೇದಗೆ ಹೂವು, ಸಂಪಿಗೆ ಹೂವು, ಪರ್ವತ ಬಾಳೆಯ ಹೂವು, ಗೋರಂಟಿಯ ಹೂವುಗಳೆಲ್ಲಾ ಸೇರಿ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತಿದ್ದುದನ್ನು ನೋಡಿ ಏನಮ್ಮ ಸೊಗಸು ನೀನು ನನ್ನ ಜೊತೆಯಲ್ಲಿದ್ದರೆ ಬನವೇ ಸೊಗಸು ಎನ್ನುತ್ತಾನೆ. | |
| 22. | ಬಾಹುಬಲಿಯೂ ಮಗುವೂ ಒಂದೇ ಹೇಗೆ ?<br>*ಉತರ :*<br>ಮಗುವಿಗೆ ಸ್ನಾನ ಮಾಡಿಸುವ ಮುನ್ನ ಎಣ್ಣೆಹಚ್ಚಿ ಬರೀ ಮೈಯಲ್ಲಿ ನಿಲ್ಲಿಸುತ್ತಾಳೆ. ಮಗುವು ತಂಬಿಗೆ ನೀರು ತರುವವರೆಗೆ ಕಾಯುತ್ತಾ ನಿಂತಿರುತ್ತದೆ. ಹಾಗೆಯೇ ಬಾಹುಬಲಿ (ಗೊಮ್ಮಟೇಶ್ವರ) ಯು ಬರೀ ಮೈಯಲ್ಲಿ ನಿಂತಿರುವುದನ್ನು ನೋಡಿ ಮಗುವು ನಾನು ಬಾಹುಬಲಿಯೂ ಒಂದೇ ಎಂದು ಹೇಳುತ್ತದೆ. | |
| 23. | ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?<br>*ಉತ್ತರ :*<br>ಸದ್ದು ಮಾಡದೆ ಹೂಗಳು ಅರಳುವಂತೆ, ನಕ್ಷತ್ರಗಳು ಮಿನುಗುವಂತೆ, ಮೌನವಾಗಿ ಕರ್ಪೂರ ಉರಿಯುವಂತೆ, ದೀಪದೆದುರಿಗೆ ತಿಮಿರ ಸರಿಯುವಂತೆ ಕರ್ತವ್ಯವನ್ನು ಮೌನವಾಗಿ ಸದ್ದು ಮಾಡದೆ ಮಾಡಬೇಕೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ. | |
| 24. | ಬದುಕಿನಲ್ಲಿ ಒಂದೇ ಹೆಗ್ಗುರಿಯನ್ನೇಕೆ ಇರಿಸಿಕೊಳ್ಳಬೇಕು ?<br>*ಉತ್ತರ :*<br>ಬದುಕಿಗೊಂದು ಗುರಿಯಿಲ್ಲದಿದ್ದರೆ, ಅದು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದೆ ಅಪಾರವಾದ ಕಡಲಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತಾಗುತ್ತದೆ. ಸ್ವೀಕರಿಸಿದ ಗುರಿಯನ್ನು ನಿರ್ವಹಿಸಲು ಕಷ್ಟವೆನಿಸಿದರೂ ಪರಿಹರಿಸಿಕೊಂಡು ಸಾಗಬೇಕಾಗುತ್ತದೆ. ತನ್ನ ಹಾಗೂ ಸಮಾಜದ ಅಭಿವೃದ್ಧಿಗಾಗಿ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಬದುಕಿನಲ್ಲಿ ಒಂದೇ ಹೆಗ್ಗುರಿಯನ್ನು ಇರಿಸಿಕೊಳ್ಳಬೇಕು. | |
| 25. | ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?<br>*ಉತ್ತರ :*<br>ಅಪ್ಪಯ್ಯನಿಗೆ ಹೆಣ್ಣು ಮಕ್ಕಳು ಹುಟ್ಟಿದರೆ ಬೇರೆ ಮನೆಗೆ ಸೊಸೆಯಾಗಿ; ಗಂಡು ಮಕ್ಕಳು ಹುಟ್ಟಿದರೆ ಮನೆಯ ತೊಲೆಗಂಭವಾಗಿ ಹೆಸರನ್ನು ತರುತ್ತಾರೆಂದು ಹೇಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಬಸವಣ್ಣನವರು ಕುರುಡು ಸಂಪ್ರದಾಯವನ್ನು ಹೇಗೆ ಲೇವಡಿ ಮಾಡಿದ್ದಾರೆ ?<br>*ಉತರ :*<br>ಬಸವಣ್ಣನವರು ಧಾರ್ಮಿಕ, ಸಾಮಾಜಿಕ ಕುರುಡು ನಂಬಿಕೆಗಳ ವಿರುದ್ಧ ಕ್ರಾಂತಿಯನ್ನುಂಟು ಮಾಡಿದವರು. ಮರವನ್ನು ಸುತ್ತುವ; ನೀರನ್ನು ಕಂಡಲ್ಲಿ ಮುಳುಗುವ ಸಾಮಾನ್ಯರಿಗೆ ಮರ ಒಣಗಿಹೋಗುತ್ತದೆ. ನೀರು ಬತ್ತಿ ಹೋಗುತ್ತದೆ. ಆದರೆ ನಿಮಗೆ ಇದರ ಬಗ್ಗೆ ನಂಬಿಕೆಯಿದೆ, ಕೂಡಲ ಸಂಗಮನಲ್ಲಿ ನಂಬಿಕೆಯಿಲ್ಲ ಎಂದು ಕುರುಡು ಸಂಪ್ರದಾಯದ ಬಗ್ಗೆ ಲೇವಡಿ ಮಾಡಿದ್ದಾರೆ. | |
| 27. | 'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು ?<br>*ಉತ್ತರ :*<br>ಹೆಂಗಳೆಯರ ಮಂದೆ ಜಂಭ ಕೊಚ್ಚಿಕೊಂಡು; ನಾಡ ನರಿಯಂತೆ ಹಲ್ಲು ಕಿರಿಯುವ ಉತ್ತರನನ್ನು ನೋಡಿ ಮನಸ್ಸಿನಲ್ಲಿ ಹೊಟ್ಟೆ ಒಡೆಯುವಂತೆ ನಗುತ್ತಾ ಆ ನಿನ್ನ ಜಂಭದ ಮಾತು; ಎಲ್ಲಿ ಹೋಯಿತು ನಡೆ ಯುದ್ಧ ಮಾಡು; ಶತ್ರುಗಳನ್ನು ಜಯಿಸು ನಾನು ನಿನ್ನನ್ನು ಬಿಡುವುದಿಲ್ಲ ಎನ್ನುತಾನೆ. | |
| 28. | ಕುರ್ಚಿಯ ಬಗ್ಗೆ ಜೋಯಿಸರ ಹೆಂಡತಿಗೆ ಇರುವ ಭಾವನಾತ್ಮಕ ಸಂಬಂಧ ಎಂತಹುದು ?<br>*ಉತ್ತರ :*<br>ಜೋಯಿಸರ ಹೆಂಡತಿಗ ಬೇರೆಲ್ಲದಕ್ಕಿಂತ ಆ ಕುರ್ಚಿಯ ಮೇಲೆ ತುಂಬಾ ನಂಬಿಕೆ, ಜೋಯಿಸರಿಂದ ನಿಮಿತ್ಯ ಕೇಳಿ ಹೋದವರೊ, ಜಾತಕ ತೋರಿಸಿದವರೂ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದರೆ ಅದೆಲ್ಲ ಅವರ ಪುಣ್ಯವೆಂದು ಮನಸ್ಸಿನಲ್ಲಿ ಆ ಕುರ್ಚಿಗೆ ನಮಸ್ಕರಿಸುವ ಮಹಾತಾಯಿ. | |
| 29. | 'ಯಾರೇನು ಅಂದಿಲ್ಲ, ಒಳ್ಳೆಯವರಿವರೆಲ್ಲ' ಸಾವಿತ್ರಿಯ ಈ ಹಿಗ್ಗಿಗೆ ಕಾರಣವೇನು ?<br>*ಉತ್ತರ :*<br>ಹೊಸದಾಗಿ ಮದುವೆಯಾಗಿದ್ದ ನವವಧುವೊಬ್ಬಳು ಅಡಿಗೆ ಮಾಡಲು ಬಾರದೆ ತಾಯಿಗೆ ಫೋನ್ ಮಾಡಿ ಅವಳ ಮಾಹಿತಿಯಂತೆ ಅಡಿಗೆ ಮಾಡಿ ಬಡಿಸುತ್ತಾಳೆ. ಅಡಿಗೆ ಕಹಿಯಾದರೂ ಎಲ್ಲರೂ ಸಹಿಸಿಕೊಂಡು ಊಟ ಮಾಡುತ್ತಾರೆ. ಅವರಮ್ಮ ಸಾಂಬಾರಿಗೆ ಸೌತೆಕಾಯಿ ಹಾಕುವಾಗ ನೋಡಿ ಹೆಚ್ಚಮ್ಮ ಎನ್ನುವುದನ್ನು ಮರೆತಿರುತ್ತಾಳೆ. ಗಡಿಬಿಡಿಯಿಂದಾದ ಈ ಕಾರ್ಯದಿಂದ ಊಟ ಮಾಡಿದವರು ಏನೂ ಅನ್ನಲಿಲ್ಲವೆಂದು ಸಂತಸ ವ್ಯಕ್ತಪಡಿಸುತ್ತಾಳೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಕೊರಡ ಕೊನರಿಸಿ ......................................................<br>..........................................................................<br>..........................................................................<br>............................................... ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ......................................................<br>..........................................................................<br>................................................. ತುಂಬ ಸವಿಚೈತ್ರವು.<br>***ಉತ್ತರ :***<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | 1 × 3 = 3 |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಕುವೆಂಪು<br>***ಉತ್ತರ :***<br>ಕುವೆಂಪುರವರು ೧೯೦೪–೧೯೯೪ ರವರೆಗೆ ಜೀವಿಸಿದ್ದರು. ಇವರು ಶಿವಮೊಗ್ಗ ಜಿಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಜನಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇವರ ಕೃತಿಗಳು ಚಂದ್ರಮಂಚಕೆ ಬಾ ಚಕೋರಿ, ನವಿಲು, ಪಕ್ಷಿಕಾಶಿ (ಕವನ ಸಂಕಲನಗಳು) ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ, ಜಲಗಾರ (ನಾಟಕ) ರಸೋ ವೈಸಃ, ವಿಭೂತಿ ಪೂಜೆ, ದ್ರೌಪದಿಯ ಸಿರಿಮುಡಿ (ವಿಮರ್ಶೆ) ನನ್ನ ದೇವರು ಮತ್ತು ಇತರ ಕಥೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿ) ಶ್ರೀರಾಮಾಯಣದರ್ಶನಂ ಮಹಾಕಾವ್ಯ ಇವೇ ಮೊದಲಾದವುಗಳು.<br><br>ಪದ್ಮಭೂಷಣ, ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ, ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ, ಪಂಪ, ಕರ್ನಾಟಕ ರತ್ನ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. | |
| 32. | ಗದುಗಿನ ನಾರಣಪ್ಪ (ಕುಮಾರವ್ಯಾಸ)<br>***ಉತ್ತರ :***<br>ಇವರು ಕುಮಾರವ್ಯಾಸ ಎಂದೇ ಪ್ರಖ್ಯಾತರಾಗಿದ್ದಾರ. ಇವರು ೧೪೩೦ ರಲ್ಲಿ ಗದುಗಿನ ಕೋಳಿವಾಡದಲ್ಲಿ ಜನಿಸಿದರು.<br>ಇವರು ಕರ್ನಾಟ ಭಾರತ ಕಥಾಮಂಜರಿ (ಗದುಗಿನ ಭಾರತ), ಐರಾವತ ಕೃತಿಗಳನ್ನು ರಚಿಸಿದ್ದಾರೆ.<br>ಇವರು ಕಾವ್ಯದ ಉದ್ದಕ್ಕೂ ರೂಪಕಾಲಂಕಾರವನ್ನು ಹೆಚ್ಚು ಬಳಸಿರುವುದರಿಂದ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದಿಗೆ ಪಾತ್ರರಾಗಿದ್ದಾರೆ.<br>**ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | $4 \times 3 = 12$ |
| | ಕೃತಿ, ಕರ್ತೃ, ಪದ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | ಕುರುಡರಾಗಿದ್ದರೂ ಕಣ್ಣಿದ್ದವರ ಕಣ್ಣು ತೆರೆಯಿಸಿದ ಮಹಾಶಕ್ತಿ.<br>***ಉತ್ತರ :***<br>ಈ ವಾಕ್ಯವನ್ನು ಸಂಪಾದಿತ ಪಾಠವಾದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಪಾಠದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.<br>ಸಂಪಾದಕರು ಗವಾಯಿಗಳ ಸಾಧನೆಯ ಬಗ್ಗೆ ಹೇಳುವಾಗ ಬಂದ ಮಾತಾಗಿದೆ.<br>ಉನ್ನತವಾದ ಗುರಿಯನ್ನು ಹೊಂದಲು ಯಾವುದೇ ರೀತಿಯ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು. ಅದರೊಂದಿಗೆ ಸಾಧಿಸಬೇಕೆಂಬ ಛಲವಿದ್ದಾಗ ಗುರಿ ಮತ್ತಷ್ಟು ಹತ್ತಿರವಾಗುತ್ತದೆ. ಅನೇಕ ಅಂಗವಿಕಲರ ಸಾಧನೆಯನ್ನು ಕಾಣಬಹುದು. ಕಣ್ಣಿದ್ದು ಅನೇಕರು ಯಾವುದೇ ಸಾಧನೆ ಮಾಡಲಾಗುವುದಿಲ್ಲ. ಅಂತಹವರ ಕಣ್ಣು ತೆರೆಯಿಸಿದ ಮಹಾಶಕ್ತಿ ಗವಾಯಿಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | ಇತರರನ್ನು ಸುಮ್ಮನೆ ಅನುಕರಿಸುವುದು ಸರ್ವಥಾಕೂಡದು<br>***ಉತ್ತರ :***<br>ಈ ವಾಕ್ಯವನ್ನು ಬಿ.ಪಿ. ರಾಧಾಕೃಷ್ಣ ಅವರ ಸಿ.ವಿ. ರಾಮನ್ ಕೃತಿಯಿಂದಾಯ್ದ 'ಶಿಷ್ಯವತ್ಸಲ ರಾಮನ್' ಎಂಬ ಪಾಠದಿಂದ ಆರಿಸಲಾಗಿದೆ.<br>ರಾಮನ್‌ರವರು ಶಿಷ್ಯರಿಗೆ ಅನ್ವೇಷಣೆ ಅಥವಾ ಸಂಶೋಧನಾ ಕಾರ್ಯದಲ್ಲಿ ಇತರರನ್ನು, ಅನುಕರಿಸದ ಸ್ವಂತಿಕೆಯಿಂದ ಮಾಡಬೇಕು.<br>ಇತರರನ್ನು ಅನುಕರಿಸಿದರೆ ನಮ್ಮಲ್ಲಿ ಸೃಜನಶೀಲತೆಯು ಬೆಳೆಯುವುದಿಲ್ಲ ಎಂಬುದಾಗಿದೆ. | |
| 35. | ನನ್ನ ಇರುವಿಕೆಯ ಅರಿವಾಗುತ್ತದೆ<br>***ಉತ್ತರ :***<br>ಈ ವಾಕ್ಯವನ್ನು ಸುಕನ್ಯಾ ಮಾರುತಿಯವರ 'ನಾನೆಂಬ ಮಾಯೆ' ಕವನ ಸಂಕಲನದಿಂದಾಯ್ದ ಅರಿವು ಪದ್ಯದಿಂದ ಆರಿಸಲಾಗಿದೆ.<br>ಕವಯಿತ್ರಿಯ ನಿತ್ಯದಾಸೋಹ ಮಾಡಿ ಸೋತು ಸುಣ್ಣವಾಗಿ ಮಲಗಿದ್ದಾಗ ಏನೋ ಕಳೆದುಕೊಂಡಂತಹವರಾಗಿ ಮೈಯನ್ನು ಮುಟ್ಟಿ ನೋಡಿಕೊಳ್ಳುತ್ತಾರೆ. ಆಗ ಅವರ ಇರುವಿಕೆಯ ಅರಿವು ಉಂಟಾಗುತ್ತದೆ. | |
| 36. | ನೀನು ಸೋತು ಗೆದ್ದೆ ಅಣ್ಣ, ನಾನು ಗೆದ್ದು ಸೋತೆನು.<br>***ಉತ್ತರ :***<br>ಈ ವಾಕ್ಯವನ್ನು ಸು.ರಂ. ಎಕ್ಕುಂಡಿಯವರ ಕಥನ ಕವನಗಳು ಎಂಬ ಕವನ ಸಂಗ್ರಹದಿಂದಾಯ್ದ 'ನನ್ನ ಹಾಗೆಯೆ' ಪದ್ಯದಿಂದ ಆರಿಸಲಾಗಿದೆ.<br>ಬಾಹುಬಲಿಯು ತನ್ನ ಅಣ್ಣನಾದ ಭರತನನ್ನು ಜಲಯುದ್ಧ; ಮಲ್ಲಯುದ್ಧದಲ್ಲಿ ಜಯಿಸುತ್ತಾನೆ. ಆಗ ಅಣ್ಣನೊಡನೆ ಯುದ್ಧ ಮಾಡಿದೆನಲ್ಲಾ ಎಂಬ ಭಾವನೆಯಿಂದ ವೈರಾಗ್ಯವುಂಟಾಗಿ ತಪಸ್ಸಿಗೆ ಹೊರಡುತ್ತಾನೆ. ಆಗ ರಾಜ್ಯವನ್ನು ಹಿಂದುರುಗಿಸುತ್ತಾ ನೀನು ಸೋತು ಗೆದ್ದೆ ಅಣ್ಣ; ನಾನು ಗೆದ್ದು ಸೋತೆನು ಎಂದು ಹೇಳುತ್ತಾನೆ.<br>ಬಾಹುಬಲಿಯ ವೈರಾಗ್ಯವನ್ನು ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದಬಳಕೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ. | |

***ಅಥವಾ***

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೊಬೆಲಿಗೆ ಸಮಾನ ಎನಿಸಿದ್ದು ಹೇಗೆ ? ವಿವರಿಸಿ.

***ಉತ್ತರ :***

ಅಜ್ಜನ ಸಂಬಂಧಿಕರೊಬ್ಬರು ಬಿಜಾಪುರದಿಂದ ಒಂದು ಪತ್ರ ಬರೆದಿದ್ದರು. ನಮ್ಮ ಸಂಬಂಧಿಕರೊಬ್ಬರಿಗೆ ಹೆರಿಗೆಯಾಗಿದೆ. ಇಲ್ಲಿ ಒಳ್ಳೆಯ ಅಕ್ಕಿ ಸಿಗದಿರುವುದರಿಂದ ಧಾರವಾಡದಿಂದ ಒಂದಷ್ಟು ಅಕ್ಕಿಯನ್ನು ತರಬೇಕೆಂದು ತಿಳಿಸಿದ್ದರು.

ಆದರೆ 1961 ರಲ್ಲಿ ಚೈನಾ ಯುದ್ಧವಾಗಿ ರೇಷನ್ ಪದ್ಧತಿ ಜಾರಿಯಲ್ಲಿತ್ತು; ಅಕ್ಕಿಯನ್ನು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಕೊಂಡೊಯ್ಯುವಂತಿರಲಿಲ್ಲ.

ಅಜ್ಜನಿಗೆ ಕಾಯಿದೆ ಗೊತ್ತಿದ್ದರೂ ಹೃದಯದಲ್ಲಿನ ಪ್ರೀತಿ ಕಾಯಿದೆಯನ್ನು ಮೀರಲು ಪ್ರೋತ್ಸಾಹಿಸಿತು.

ಅಜ್ಜನು ಬಂಧುಗಳ ಮೇಲಿನ ಪ್ರೀತಿಯಿಂದ ಅಕ್ಕಿಯನ್ನು ಹಾಸಿಗೆಯ ಸುರುಳಿಯಲ್ಲಿ ಸುತ್ತಿಕೊಂಡು ವಿಜಾಪುರಕ್ಕೆ ರೈಲಿನಲ್ಲಿ ಹೋದರು. ರೈಲಿನಲ್ಲಿ ಯಾರಿಗೂ ಕಾಣಬಾರದೆಂದು ಇಳಿದು ಹೋಗುವಾಗ ಪೊಲೀಸನೊಬ್ಬನು ಅಜ್ಜನ ಹೆಗಲ ಮೇಲೆ ಕೈಹಾಕಿ ಕರೆದಾಗ ಅಜ್ಜ ಹೆದರಿ ಬೆವರಿಬಿಟ್ಟರು. "ನಡೀರಿ ನಿಮ್ಮನ್ನು ಸಾಹೇಬ್ರು ಕರೀತ್ತಿದ್ದಾರೆ" ಎಂದು ಅವರನ್ನು ಪೊಲೀಸ್ ಜೀಪಿನಲ್ಲಿ ಹತ್ತಿಸಿಕೊಂಡು ಸಾಹೇಬರ ಮನೆಗೆ ಕರೆದುಕೊಂಡು ಹೋಗುತ್ತಾರೆ.

***ಅಥವಾ***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗುರುರಾಜ ಕರ್ಜಗಿಯವರ ತಾತ ಶಿಕ್ಷಕ ವೃತ್ತಿಯಲ್ಲಿದ್ದಾಗ ಅನೇಕರಿಗೆ ಸಹಾಯ ಮಾಡಿದ್ದರು. ಅಂತಹವರಲ್ಲಿ ಭೀಮ್ಯಾನು ಒಬ್ಬ. ಅವನ ತಂದೆ ರಸ್ತೆ ಗುಡಿಸುವ ಕೆಲಸ ಮಾಡಿಕೊಂಡಿದ್ದ. ತನ್ನ ಮಗನೂ ಇದೇ ಕೆಲಸವನ್ನು ಮಾಡಿಕೊಂಡು ಹೋಗಬೇಕೆಂಬುದು ಅವನ ಆಶಯವಾಗಿತ್ತು. | |
| | ಆದರೆ ಅಜ್ಜ ಭೀಮ್ಯಾನನ್ನು ಶಾಲೆಗೆ ಸೇರಿಸಿಕೊಂಡು ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ಬಳಿಕ ಹೆಚ್ಚಿನ ವ್ಯಾಸಂಗಕ್ಕೆ ಹಾಸ್ಟೆಲಿಗೆ ಸೇರಿಸಿದ್ದರು. | |
| | ಆದರೆ ಭೀಮ್ಯಾನು ಹೆಚ್ಚಿನ ವ್ಯಾಸಂಗವಾದ ಬಳಿಕ ಪೊಲೀಸ್ ಅಧಿಕಾರಿಯಾಗಿರುತ್ತಾರೆ. ಅಜ್ಜನಿಗೆ ವಿಷಯ ತಿಳಿದಿರುವುದಿಲ್ಲ. ವಿಷಯ ತಿಳಿದು ಅವನ ಮನೆಯಲ್ಲಿ ಭೇಟಿಯಾಗಿ ಅತೀವ ಪ್ರೀತಿಯಿಂದ ಕಪಾಳಕ್ಕೆ ಹೊಡೆಯುತ್ತಾರ. "ಹೊಡೆರಿ ಸರ್ ಈ ದೇಹವೇ ನಿಮ್ಮದು; ನಿಮ್ಮ ಹೊಡೆತ ತಿಂದೇ ಮನಶ್ಯಾ" ಆಗಿದ್ದು ಎಂದು ಹೇಳುತ್ತಾನೆ. "ನನ್ನ ಮೈಮೇಲಿನ ಚರ್ಮ ಸುಲಿದು ನಿಮ್ಮ ಕಾಲಿಗೆ ಚಪ್ಪಲಿ ಮಾಡಿಸಿದ್ರು ನನ್ನ ಋಣ ತೀರುವುದಿಲ್ಲ" ಎಂದಾಗ ಇಬ್ಬರೂ ತಬ್ಬಿಕೊಳ್ಳುತ್ತಾರೆ. | |
| | ಒಂದು ಕಡೆ ಕೃತಾರ್ಥನಾದ ಗುರು; ಇನ್ನೊಂದೆಡೆ ಕೃತಜ್ಞನಾದ ಶಿಷ್ಯ. ಈ ದೃಶ್ಯವನ್ನು ನೋಡಿದ ಲೇಖಕರು ಸಾರ್ಥಕ ಶಿಕ್ಷಕತ್ವದ ಗುರುತು ಎಂದು ಹೇಳುತ್ತಾ ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ನೊಬೆಲ್ ಪ್ರಶಸ್ತಿ ಎಂದು ಹೇಳುತ್ತಾರೆ. | |
| 38. | 'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ವಿವರಿಸಿ. | |
| | ***ಅಥವಾ*** | |
| | ಗೋಪಾಲಕೃಷ್ಣ ಅಡಿಗರು ಹೇಳಿರುವಂತೆ ಜೀವನ ಸಾರ್ಥಕ್ಯಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳಾವುವು ? ವಿವರಿಸಿ. | |
| | ***ಉತ್ತರ :*** | |
| | ಮಾನವನ ಬದುಕು ಶ್ರೇಷ್ಠವಾದುದು ಬದುಕಿಗೊಂದು ಗುರಿಯಿದ್ದರೆ ಸಾಕು. ಇಲ್ಲದಿದ್ದರೆ ಚುಕ್ಕಾಣಿಯಿಲ್ಲದೆ ಸಮುದ್ರದಲ್ಲಿ ಚಲಿಸುವ ಹಡಗಿನಂತಾಗುತ್ತಾ ಸಾಗುತ್ತದೆ ಜೀವನ. | |
| | ಅಳಿಯಾಸೆಗಳ ಸುಳಿಗೆ ಸಿಲುಕಿದ ಮನಸ್ಸು ನೆಲೆಯಿರದೆ ತೊಳಲುವುದು; ದಿನದ ಕೆಲಸ ಫಲಿತವಾಗಲು ಪ್ರಾರಂಭ ಉತ್ತಮವಾಗಿದ್ದರೆ ಅಂತ್ಯವೂ ಸುಖಕರವಾಗಿರುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕಮಲ ಕೆಲಸರಿನಲ್ಲಿದ್ದರೂ ಮೇಲಿನ ರವಿಕಿರಣ ನೋಡಿ ಅರಳುವಂತೆ ನಮ್ಮ ಬದುಕಾಗಬೇಕು. | |
| | ಗಾಳಿ ಬಂದ ಕಡೆಗೆ ವಾಲುವ ಹೆಣ್ತನ, ದಾಳಿಗೆ ಶರಣಾಗುವ ಹೇಡಿತನವಿರಬಾರದು ಹಿಡಿದ ದಾರಿಯಲ್ಲೇ ಸಾಗಬೇಕು. | |
| | ಒಂದು ಬಾಣಕ್ಕೆ ಒಂದೇ ಗುರಿ; ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ನಮ್ಮ ಜೀವನದ ಗುರಿ ಒಂದೇ ಆಗಿದ್ದು ಹಗಲಿರುಳು ಹೆಗ್ಗುರಿಗಾಗಿ ಹೋರಾಡಬೇಕು. | |
| | ನರನೊಳಗೆ ನಾರಾಯಣನನ್ನು ಕಾಣುವ, ತಿರೆಯಲ್ಲಿಯ ಸ್ವರ್ಗವನ್ನು ಕಾಣುವ, ಪರಹಿತಕ್ಕಾಗಿಯೆ ಚಿಂತಿಸುವ ಗುರಿಯಿದ್ದಾಗ ನಾವು ಯಾವುದೇ ಅಪಕೀರ್ತಿಗೆ ಒಳಗಾಗುವುದಿಲ್ಲ ಎಂಬುದು ಕವಿಯ ಆಶಯವಾಗಿದೆ. | |
| | ***ಅಥವಾ*** | |
| | ಕವಿ ಗೋಪಾಲಕೃಷ್ಣ ಅಡಿಗರವರು ಜೀವನದಲ್ಲಿ ಒಂದು ಗುರಿ ಇರಬೇಕು. ಗುರಿಯನ್ನು ನಿಶ್ಚಯಿಸಲು ಜೀವನ ಸಾರ್ಥಕ್ಯಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಈ ರೀತಿ ಹೇಳುತ್ತಾರೆ. | |
| | ನಮ್ಮ ಜೀವನದಲ್ಲಿ ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕು, ಆಳಿಯಾಸೆಗಳ ಸುಳಿಗೆ ಸಿಲುಕಬಾರದು. ದಿನದ ಕಾರ್ಯಗಳು ಫಲಿತವಾಗಲು ನಿರ್ದಿಷ್ಟ ಗುರಿಯ ಆದಿ–ಅಂತ್ಯ ಇರಬೇಕು. | |
| | ಹೇಗೆ ಕಮಲವು ಕೆಸರಿನಲ್ಲಿದ್ದರೂ ಸೂರ್ಯನ ಕಿರಣಗಳನ್ನು ನೋಡಿ ಅರಳುವಂತೆ. ಜೀವನ ಉತ್ಸಾಹವಿರಬೇಕು. ಗಾಳಿ ಬಂದ ಕಡೆಗೆ ತಿರುಗುವಾ ಹೆಣ್ತನ, ದಾಳಿ ಬಂದಾಗ ಹೇಡಿತನ ಇರದೆ ಪೌರುಷದ ಬಾಳ್ವೆ ಇರಬೇಕು. | |
| | ಹೇಗೆಂದರೆ ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ನಮ್ಮ ಬಾಳಿನಲ್ಲಿ ಒಂದು ಗುರಿಗಾಗಿ ಹೋರಾಡಬೇಕು. | |
| | ನರನೊಳಗೆ ನಾರಾಯಣನ, ತಿರೆಯೊಳಗೆ ಸ್ವರ್ಗ ಕಾಣುವ ಗುರಿ. ನಮ್ಮ ಬಾಳುವೆಯ ಸಾರ್ಥಕ್ಯಕ್ಕೆ ಕಾರ್ಯಗಳನ್ನು ಜೋಡಿಸಿಕೊಳ್ಳುವಂತಾಗಬೇಕು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 39. | 'ವೀರೇಶ್ವರ' ಪದದಲ್ಲಿ ಏರ್ಪಟ್ಟಿರುವ ಸಂಧಿ<br>***ಉತ್ತರ :*** (ಬಿ) ಗುಣ ಸಂಧಿ | |
| 40. | 'ಎಚ್ಚರ' ಎಂಬ ಅರ್ಥಕೊಡುವ ಪದ<br>***ಉತ್ತರ :*** (ಎ) ಜಾಗೃತಿ | |
| 41. | 'ತದ್ಭವ' ರೂಪದಲ್ಲಿರುವ ಪದ<br>***ಉತ್ತರ :*** (ಸಿ) ಬಣ್ಣನೆ | |
| 42. | ಪೂರ್ವಪದವು ಸಂಖ್ಯಾವಾಚಿಯಾಗಿರುವ ಸಮಾಸ<br>***ಉತ್ತರ :*** (ಎ) ದ್ವಿಗು | |
| 43. | ಸರ್ವನಾಮಕ್ಕೆ ಉದಾಹರಣೆ ಇದು<br>***ಉತ್ತರ :*** (ಡಿ) ಅವನು | |
| 44. | ದ್ವಿರುಕ್ತಿಗೆ ಉದಾಹರಣೆಯಾದ ಪದ<br>***ಉತ್ತರ :*** (ಎ) ಹೊಚ್ಚ ಹೊಸದು | |
| 45. | ಛಂದಸ್ಸಿನಲ್ಲಿ ಗಣ ವಿಂಗಡಿಸಲು ಗುರು–ಲಘುಗಳನ್ನು ಗುರುತಿಸುವುದಕ್ಕೆ ಹೀಗೆನ್ನುವರು.<br>***ಉತ್ತರ :*** (ಡಿ) ಪ್ರಸ್ತಾರ | |
| 46. | ಗ್ರಾಂಥಿಕ ರೂಪದಲ್ಲಿರುವ ಪದ<br>***ಉತ್ತರ :*** (ಎ) ಏತಕ್ಕೆ | |
| 47. | ಅಕ್ಷರಗಳು ಹಾಗೂ ಪದಗಳು ನಿಯಮಿತ ಸ್ಥಾನದಲ್ಲಿ ಪುನರಾವರ್ತನೆಗೊಂಡರೆ, ಅದು<br>***ಉತ್ತರ :*** (ಬಿ) ಶಬ್ದಾಲಂಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | 'ಮನೆಯಲ್ಲಿ' ಈ ಪದದ ವಿಭಕ್ತಿ<br>***ಉತ್ತರ :*** (ಡಿ) ಸಪ್ತಮೀ | |
| 49. | ಏಕವಚನದಲ್ಲಿರುವ ನಾಮಪದವಿದು<br>***ಉತ್ತರ :*** (ಸಿ) ಮಗು | |
| 50. | ವರ್ತಮಾನ ಕಾಲದಲ್ಲಿರುವ ಪದವಿದು<br>***ಉತ್ತರ :*** (ಎ) ಬರೆಯುತ್ತಾನೆ | |
| | **ವಿಭಾಗ – 'ಸಿ'** | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | ಮಂಡಲ್ ಗ್ರಾಮದ ಸುತ್ತಮುತ್ತ ಅರಣ್ಯವಿದೆ. ಈ ಅರಣ್ಯದಿಂದ ಮರಮುಟ್ಟು ಸೌದೆ ಇತ್ಯಾದಿಗಳಿಗಾಗಿ ಮರ ಕಡಿಯುವುದನ್ನು ಸರ್ಕಾರ ನಿಷೇಧಿಸಿತ್ತು. ಆದರೆ ಅದೇ ಅರಣ್ಯದಲ್ಲಿ ಮರಗಳನ್ನು ಕಡಿಯಲು ಅಲಹಾಬಾದ್‌ನ ಆಟದ ಸಾಮಾನುಗಳ ತಯಾರಿಕನೊಬ್ಬನಿಗೆ ಅನುಮತಿ ನೀಡಿತ್ತು. ಮರ ಕಡಿಯಲು ಮಂಡಲ್ ಗ್ರಾಮಕ್ಕೆ ಸಿಬ್ಬಂದಿಯವರೊಂದಿಗೆ ಕಂಟ್ರಾಕ್ಟರ್ ಬಂದ. ಗ್ರಾಮದ ಮಹಿಳೆಯರು ಮರ ಕಡಿಯಕೂಡದೆಂದು ಕೇಳಿಕೊಂಡರು. ಆದರೆ ಕಂಟ್ರಾಕ್ಟರ್ ಅದಕ್ಕೆ ಸಿದ್ಧವಿರಲಿಲ್ಲ. ಗ್ರಾಮದ ಜನತೆ ಮರಗಳನ್ನು ರಕ್ಷಿಸಲು ನಿರ್ಧರಿಸಿದರು. ಜನ ಮುಂದೆ ಬಂದು ಕಡಿಯಬೇಕೆಂದು ಗುರುತು ಮಾಡಿದ್ದ ಮರಗಳನ್ನು ಅಪ್ಪಿಕೊಂಡರು. ಮರಗಳನ್ನು ಕಡಿಯಬೇಕಾದರೆ ಅದಕ್ಕಿಂತ ಮುಂಚೆ ನಮ್ಮನ್ನು ಕತ್ತರಿಸಿ ಎಂದರು. | |
| 51. | ಮರ ಕಡಿಯುವ ಮುನ್ನ ಜನ ಏನೆಂದು ಹೇಳಿದರು ?<br>***ಉತ್ತರ :***<br>ಮರಗಳನ್ನು ಕಡಿಯಬೇಕಾದರೆ ಅದಕ್ಕಿಂತ ಮುಂಚೆ ನಮ್ಮನ್ನು ಕತ್ತರಿಸಿ ಎಂದು ಹೇಳಿದರು. | |
| 52. | ಸರ್ಕಾರದ ನಿಷೇಧ ಏನಾಗಿತ್ತು ?<br>***ಉತ್ತರ :***<br>ಸರ್ಕಾರ ಮರಮುಟ್ಟು, ಸೌದೆ ಇತ್ಯಾದಿಗಳಿಗೆ ಮರ ಕಡಿಯುವುದನ್ನು ನಿಷೇಧಿಸಿತು. | |
| 53. | ಸರ್ಕಾರ ಮರ ಕಡಿಯಲು ಯಾರಿಗೆ ಅನುಮತಿ ನೀಡಿತ್ತು ?<br>***ಉತ್ತರ :***<br>ಮರಗಳನ್ನು ಕಡಿಯಲು ಅಲಹಾಬಾದಿನ ಆಟದ ಸಾಮಾನುಗಳ ತಯಾರಿಕನೊಬ್ಬನಿಗೆ ಅನುಮತಿ ನೀಡಿತ್ತು. | |
| 54. | ಮರ ಕಡಿಯಲು ಬಂದಾಗ ಗ್ರಾಮದ ಜನರು ಏನು ಮಾಡಿದರು ?<br>***ಉತ್ತರ :***<br>ಗ್ರಾಮದ ಜನ ಮುಂದೆ ಬಂದು ಕಡಿಯಬೇಕೆಂದಿದ್ದ ಮರಗಳನ್ನು ಅಪ್ಪಿಕೊಂಡರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | * ಆಳಾಗಿ ದುಡಿಯಬಲ್ಲವ; ಅರಸನಾಗಿ ಆಳಬಲ್ಲ | |
| | * ಬೆಳೆಯುವ ಸಿರಿ ಮೊಳಕೆಯಲ್ಲಿ | |
| | * ಕೈಕೆಸರಾದರೆ ಬಾಯಿ ಮೊಸರು | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ನಿಮ್ಮನ್ನು ಧಾರವಾಡದ ವಾಣಿ ಪ್ರೌಢಶಾಲೆಯ 'ಮೋಹನ್' ಎಂದು ಭಾವಿಸಿಕೊಂಡು, ಪ್ರವಾಸಕ್ಕೆ ಹೋಗಲು ಅನುಮತಿಯನ್ನು ಕೋರಿ ಬೆಂಗಳೂರಿನಲ್ಲಿ ವಾಸವಾಗಿರುವ 'ನಟರಾಜ' ಎಂಬ ಹೆಸರಿನ ತಂದೆಯವರಿಗೆ ಪತ್ರವೊಂದನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಬಳ್ಳಾರಿಯ 'ರಿಜ್ವಾನ್' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯ ಬೀದಿದೀಪಗಳನ್ನು ಸರಿಪಡಿಸಲು 'ನಗರಪಾಲಿಕೆಯ ಆಯುಕ್ತರಿ'ಗೊಂದು ಮನವಿ ಪತ್ರ ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | * ಶಾಲೆಗಳಲ್ಲಿ ಗ್ರಂಥಾಲಯಗಳ ಪ್ರಾಮುಖ್ಯತೆ | |
| | * ದೂರದರ್ಶನದಿಂದಾಗುವ ಉಪಯೋಗಗಳು | |
| | * ಪರಿಸರ ಸ್ವಚ್ಛತೆಯಲ್ಲಿ ವಿದ್ಯಾರ್ಥಿಗಳ ಪಾತ್ರ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ, ಭಾಷಾಶೈಲಿಗೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |